ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 83/24**

ಪಿಡಬ್ಲ್ಯುಃ –1

ದಿನಾಂಕಃ 06.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳಪರ ವಕೀಲರಾದ ಶ್ರೀ. ಕೆ ಎಂ ಕೆ ರವರಿಂದಃ–

ನಾನು ಮಡಿಕೇರಿಯ ಮುತ್ತಪ್ಪ ದೇವಸ್ಥಾನದ ಬಳಿ ಇರುವ ನನ್ನ ಮಗನಾದ ರಮೇಶ್ ನ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನನ್ನ ಹೆಂಡತಿಯ ಹೆಸರು ಪುಷ್ಪಾ, ನನ್ನ ಮಗ ವಾಸ ಇರುವ ಮನೆಯ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಸುಮಾರು 4 ವರ್ಷಗಳಿಂದ ಸದರಿ ನನ್ನ ಮಗನ ಮನೆಯಲ್ಲಿ ವಾಸವಾಗಿದ್ದೇನೆ. ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ನನ್ನ ಮಗನ ಮನೆಯ ವಿಳಾಸದಲ್ಲಿದೆ ಹಾಗೂ ನಾನು ಆ ವಾರ್ಡಿನಲ್ಲಿ ಮತಚಲಾಯಿಸುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ಕೂಡ ಸದರಿ ವಾರ್ಡಿನಲ್ಲಿ ಮತಚಲಾಯಿಸುತ್ತಾರೆ ಎಂದರೆ ಸರಿ. ನಾನು ಸದರಿ ವಾರ್ಡ್ ನಲ್ಲೇ ಓಟ್ ಹಾಕುತ್ತಾ ಬಂದಿದ್ದೇನೆ. ನಿಮ್ಮ ಬಳಿ ಚುನಾವಣಾ ಗುರುತಿನ ಚೀಟಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಬಳಿ ಆಧಾರ್ ಕಾರ್ಡ್ ಇದೆ. ನನ್ನ ಕಾರ್ಡಿನಲ್ಲಿ ಮುತ್ತಪ್ಪ ದೇವಸ್ಥಾನದ ಬಳಿ ಇರುವ ನನ್ನ ಮಗನ ಮನೆಯ ವಿಳಾಸದಲ್ಲಿ ಇದೆ ಎಂದರೆ ಸರಿ. ಸುಮಾರು 20 ರಿಂದ 25 ವರ್ಷಗಳ ಹಿಂದೆ ನಾನು ಆಧಾರ್ ಕಾರ್ಡನ್ನು ಪಡೆದುಕೊಂಡಿದ್ದೇನೆ. ನನ್ನ ಬಳಿ ಪಡಿತರ ಚೀಟಿ ಇದೆ. ನಾನು ಸೋಮವಾರಪೇಟೆ ರಸ್ತೆಯಲ್ಲಿ ಎ ವಿ ಸ್ಕೂಲ್ ಶಾಲೆಯ ಪಕ್ಕದಲ್ಲಿರುವ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಪಡೆದುಕೊಳ್ಳುತ್ತೇನೆ. ನಾನು ಸುಮಾರು 30–40 ವರ್ಷಗಳ ಹಿಂದೆ ಪಡಿತರ ಚೀಟಿಯನ್ನು ಪಡೆದುಕೊಂಡಿದ್ದೇನೆ. ಮುತ್ತಪ್ಪ ದೇವಸ್ಥಾನದ ಬಳಿ ಇರುವ ನನ್ನ ಮಗನ ಮನೆಯಲ್ಲಿ ಇರುವಾಗಲೇ ನಾನು ಪಡಿತರ ಚೀಟಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ಮುತ್ತಪ್ಪ ದೇವಸ್ಥಾನದ ಬಳಿ ಇರುವ ನನ್ನ ಮಗನ ಮನೆಯ ವಿಳಾಸದ ಖಾಯಂ ನಿವಾಸಿ ಆದ್ದರಿಂದ ನನ್ನ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಹಾಗೂ ಪಡಿತರ ಚೀಟಿ ಸದರಿ ವಿಳಾಸದಲ್ಲೇ ಇದೆ ಎಂದರೆ ಸರಿ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಮತದಾರರ ಪಟ್ಟಿ 2022 S10 ಕರ್ನಾಟಕ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ತೋರಿಸಿ ಅದರಲ್ಲಿ 2ನೇ ಪುಟದಲ್ಲಿ ನಿಮ್ಮ ಹೆಂಡತಿ ಪುಷ್ಪಾ, ನಿಮ್ಮ ಹೆಸರು, 3ನೇ ಪುಟದಲ್ಲಿ ನಿಮ್ಮ ಮಗ ರಮೇಶ, 4ನೇ ಪುಟದಲ್ಲಿ ನಿಮ್ಮ ಸೊಸೆ ಉಷಾರವರ ಹೆಸರು ಇದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದು, ಅದನ್ನು ನಿಡಿ–1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಮತದಾರರ ಪಟ್ಟಿ 2023 S10 ಕರ್ನಾಟಕ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ತೋರಿಸಿ ಅದರಲ್ಲಿ 2ನೇ ಪುಟದಲ್ಲಿ ನಿಮ್ಮ ಹೆಂಡತಿ ಪುಷ್ಪಾ, ನಿಮ್ಮ ಹೆಸರು, 3ನೇ ಪುಟದಲ್ಲಿ ನಿಮ್ಮ ಮಗ ರಮೇಶ, 4ನೇ ಪುಟದಲ್ಲಿ ನಿಮ್ಮ ಸೊಸೆ ಉಷಾರವರ ಹೆಸರು ಇದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದು, ಅದನ್ನು ನಿಡಿ–2 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಮತದಾರರ ಪಟ್ಟಿ 2024 S10 ಕರ್ನಾಟಕ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ತೋರಿಸಿ ಅದರಲ್ಲಿ 2ನೇ ಪುಟದಲ್ಲಿ ನಿಮ್ಮ ಹೆಂಡತಿ ಪುಷ್ಪಾ, ನಿಮ್ಮ ಹೆಸರು, 3ನೇ ಪುಟದಲ್ಲಿ ನಿಮ್ಮ ಮಗ ರಮೇಶ, 4ನೇ ಪುಟದಲ್ಲಿ ನಿಮ್ಮ ಸೊಸೆ ಉಷಾರವರ ಹೆಸರು ಇದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದು, ಅದನ್ನು ನಿಡಿ–3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಮತದಾರರ ಪಟ್ಟಿ 2025 S10 ಕರ್ನಾಟಕ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ತೋರಿಸಿ ಅದರಲ್ಲಿ 2ನೇ ಪುಟದಲ್ಲಿ ನಿಮ್ಮ ಹೆಂಡತಿ ಪುಷ್ಪಾ, ನಿಮ್ಮ ಹೆಸರು, 3ನೇ ಪುಟದಲ್ಲಿ ನಿಮ್ಮ ಮಗ ರಮೇಶ, 4ನೇ ಪುಟದಲ್ಲಿ ನಿಮ್ಮ ಸೊಸೆ ಉಷಾರವರ ಹೆಸರು ಇದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದು, ಅದನ್ನು ನಿಡಿ–4 ಎಂದು ಗುರುತಿಸಲಾಯಿತು.

ನನ್ನ ಮಗನ ಸದರಿ ಮುತ್ತಪ್ಪ ದೇವಸ್ಥಾನದ ಹತ್ತಿರ ಇರುವ ನನ್ನ ಮಗನ ಮನೆಯಿಂದ ಈ ನ್ಯಾಯಾಲಯಕ್ಕೆ 4 ಕಿ ಮೀ ಆಗುವುದಿಲ್ಲ 3 ಕಿ ಮೀ ಆಗುತ್ತದೆ. ನಾನು ವಾಸ ಇರುವ ಮುತ್ತಪ್ಪ ದೇವಸ್ಥಾನದ ಹತ್ತಿರ ಇರುವ ಮನೆಯ ದಾಖಲೆಗಳು ನನ್ನ ಹೆಂಡತಿ ಪುಷ್ಪಾರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಮಗನ ಹೆಸರಿನಲ್ಲಿದೆ ಎನ್ನುತ್ತಾರೆ. ಸದರಿ ಮನೆ ನಿಮ್ಮ ಮಗನಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ಅದು ಲೀಜಿಗೆ ಪಡೆದುಕೊಳ್ಳಲಾಗಿದೆ ಎನ್ನುತ್ತಾರೆ. ಸದರಿ ಮನೆ ಇರುವ ಜಾಗ ನನ್ನ ಹೆಂಡತಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ.

ದಾವಾ ಸ್ವತ್ತು ಈ ನ್ಯಾಯಾಲಯದ ಮುಂದೆ ಇರುವ ಕೇಂದ್ರೀಯ ವಿದ್ಯಾಲಯ ಶಾಲೆಯ ಹಿಂಭಾಗದಲ್ಲಿ ಇದೆ ಎಂದರೆ ಸರಿ. ಪ್ರತಿವಾದಿ –1 ಮತ್ತು 2 ರವರು ನ್ಯಾಯಾಲಯದ ಮುಂದೆ ಇರುವ ಕೇಂದ್ರೀಯ ವಿದ್ಯಾಲಯದಿಂದ 100 ರಿಂದ 150 ಮೀಟರ್ ದೂರದಲ್ಲಿ ಇದ್ದಾರೆ ಎಂದರೆ ಸರಿ. ನಿಮ್ಮ ಮತ್ತು ಪ್ರತಿವಾದಿಗಳ ನಡುವೆ ತಕರಾರು ಇರುವ ಜಾಗವು ಪ್ರತಿವಾದಿಗಳು ವಾಸ ಇರುವ ಅವರ ಮನೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಗಳ ನಡುವೆ ತಕರಾರು ಇರುವ ಜಾಗ ಈ ನ್ಯಾಯಾಲಯದ ಎದುರಿನಲ್ಲಿದ್ದು, ಅದರ ಸರ್ವೆ ನಂಬರ್ 87/1 ಎಂದರೆ ಸರಿ. ಸರ್ವೆ ನಂಬರ್ 86/3 ರ

ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ನಿಪಿ-1 ರ ಪ್ರಕಾರ ಸರ್ವೆ ನಂಬರ್ 86/3 ಒಟ್ಟು ವಿಸ್ತೀರ್ಣ 3.32.75 ಎಕರೆ ಇದೆ ಎಂದರೆ ಇರಬಹುದು. ನಿಪಿ-1 ರಲ್ಲಿರುವ ಜಮೀನು ಸರ್ಕಾರಿ ಪೈಸಾರಿ ಜಮೀನು ಎಂದರೆ ಸರಿ. ನಾನು ಈ ದಾವೆಯನ್ನು ಸದರಿ ಸರ್ವೆ ನಂಬರಿನಲ್ಲಿ 4 ಸೆಂಟ್ ಜಾಗಕ್ಕೆ ಹಾಕಿದ್ದೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಪ್ರತಿವಾದಿಗಳ ಮನೆ, ಉತ್ತರಕ್ಕೆ ಒಂದು ಮನೆ ಇದೆ, ಅದು ಯಾರದ್ದು ಎಂದು ನನಗೆ ಗೊತ್ತಿಲ್ಲ, ದಕ್ಷಿಣಕ್ಕೆ ಒಂದು ಮನೆ ಇದೆ, ಅದು ಯಾರದ್ದು ಎಂದು ನನಗೆ ಗೊತ್ತಿಲ್ಲ. ನಾನು ಈಗ ಹೇಳಿದ ಮೇಲೆ ಹೇಳಿದ ಚೆಕ್ಕು ಬಂಧಿ ಹಾಗೂ ನನ್ನ ವಾದ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂಧಿ ಬೇರೆ ಬೇರೆ ಇದೆ ಎಂದರೆ ಸರಿ. ದಾವಾ ಸ್ವತ್ತು ನನಗೆ ಮಂಜೂರು ಮಾಡಬೇಕೆಂದು ಹೇಳಿ ನಾನು ಸುಮಾರು 45 ವರ್ಷಗಳ ಹಿಂದೆ ಮಡಿಕೇರಿ ತಹಶೀಲ್ದಾರ್ ರವರಿಗೆ ಅರ್ಜಿ ನೀಡಿರುತ್ತೇನೆ. ಆ ರೀತಿ ಅರ್ಜಿ ನೀಡಿದ ಬಗ್ಗೆ ನಿಮ್ಮ ಬಳಿ ಯಾವುದಾದರು ದಾಖಲೆ ಇದೆಯಾ ಎಂದರೆ ಸಾಕ್ಷಿಯು ನನ್ನ ಬಳಿ ಯಾವುದೇ ದಾಖಲೆ ಇಲ್ಲ, ಅದು ಕಳೆದು ಹೋಗಿದೆ. ನೀವು ನೀಡಿದ್ದ ಅರ್ಜಿಯ ನಕಲನ್ನು ಸಂಬಂಧಪಟ್ಟ ಕಚೇರಿಯಿಂದ ಪಡೆದುಕೊಂಡು ಬಂದು ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಇಲ್ಲ, ಆಗುವುದಿಲ್ಲ ಏಕೆಂದರೆ ಸದರಿ ಕಚೇರಿಯಲ್ಲಿ ಹುಡುಕುವುದು ಕಷ್ಟ ಎನ್ನುತ್ತಾರೆ. ನಾನು ದಾವಾ ಸ್ವತ್ತನ್ನು ಮಂಜೂರು ಮಾಡುವಂತೆ ಅರ್ಜಿ ನೀಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನುದಾವಾ ಸ್ವತ್ತಿನಲ್ಲಿ ಅರ್ಧಕ್ಕೆ ಹೆಂಚಿನ ಮನೆ ಕಟ್ಟಿದ್ದೇನೆ ಹಾಗೂ ಅರ್ಧ ಜಾಗದಲ್ಲಿ ಹುಲ್ಲಿನ ಹಾಸು ಹಾಕಿ ಕಟ್ಟಿದ್ದೇನೆ. ನಾನು ಒಟ್ಟು 12x13 ಅಡಿ ಜಾಗದಲ್ಲಿ ಮನೆ ಕಟ್ಟಿದ್ದೇನೆ. ಸದರಿ ಮನೆ ಇಟ್ಟಿಗೆ ಗೋಡೆಯ ಮನೆಯಾಗಿದೆ. ಸದರಿ ಮನೆಯ ಫೊಟೋಗಳನ್ನು ಹಾಜರು ಪಡಿಸಬಲ್ಲಿರಾ ಎಂದರೆ ಸಾಕ್ಷಿ ಇಲ್ಲ ಹಾಜರು ಪಡಿಸಲು ಆಗುವುದಿಲ್ಲ ಏಕೆಂದರೆ ಆ ಮನೆ ಬಿದ್ದುಹೋಗಿದೆ ಎನ್ನುತ್ತಾರೆ. ಸುಮಾರು 7-8 ವರ್ಷಗಳ ಹಿಂದೆ ಬಿದ್ದುಹೋಗಿದೆ ಎನ್ನುತ್ತಾರೆ.

(ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ. ಎಂ. ಎಫ್. ಸಿ., ಮಡಿಕೇರಿ.